ಸೀಮೆ ಎಣ್ಣೆ ಬೇಡಿಕೆ ಹಾಗೂ ವಿತರಣೆ.

1625. ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯಕ್ಕೆ ಎಷ್ಟು ಸೀಮೆಎಣ್ಣೆ ಬೇಡಿಕೆ ಇದೆ ಹಾಗೂ ಎಷ್ಟು ಸೀಮೆಎಣ್ಣೆಯ ಕೊರತೆ ಇದೆ ;
ಆ) ಸೀಮೆಎಣ್ಣೆ ವಿತರಣೆಯನ್ನು ಸಮರ್ಪಕವಾಗಿ ಹಂಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) ರಾಜ್ಯಕ್ಕೆ 67000 ಕಿಲೋ ಲೀಟರ್ ಸೀಮೆ ಎಣ್ಣೆ ಅವಶ್ಯಕವಿದೆ. ಕೇಂದ್ರ ಸರ್ಕಾರವು ನವೆಂಬರ್ 1991 ರಿಂದ ಜನವರಿ 1992 ರ ವರೆಗೆ ಮಾಹೆಯಾನ 17513 ಕಿಲೋ ಲೀಟರ್‌ನಷ್ಟು ಹಂಚಿಕೆ ಮಾಡಿದೆ. 1992 ರ ಫೆಬ್ರವರಿ ಹಾಗೂ ಮಾರ್ಚ್ ತಿಂಗಳಿಗೆ 55,866 ಕಿ.ಲೋ. ಲೀ (ತಾತ್ಕಾಲಿಕ ಹೆಚ್ಚುವರಿ ಪ್ರಮಾಣ 8353 ಕಿ. ಲೀ. ಸೇರಿ) ನಷ್ಟು ಹಂಚಿಕೆ ಮಾಡಿದೆ. ರಾಜ್ಯಕ್ಕೆ ಸೀಮೆಎಣ್ಣೆ ಕೊರತೆ 21,500 ಕಿ.ಲೀ. ನಷ್ಟಿದೆ.
ಆ) ಪಡಿತರ ಚೀಟಿದಾರರಿಗೆ ಸೀಮೆಎಣ್ಣೆಯನ್ನು ಹಂಚಿಕೆ ಮಾಡಲಾಗುತ್ತಿದೆ. ಸೀಮೆಎಣ್ಣೆಯ ವಿತರಣೆಯ ಸಮರ್ಪಕತೆಯನ್ನು ಕಾಪಾಡಲು ನಿಯತವಾಗಿ ತನಿಖೆ ಮಾಡಲಾಗುತ್ತಿದೆ. ತಪ್ಪಿತಸ್ಥ ನ್ಯಾಯಬೆಲೆ ಅಂಗಡಿಗಳು ಹಾಗೂ ಚಿಲ್ಲರೆ ವಿತರಕರು (ಹಾಕರ್ಸ್) ರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.

ಜನ್ಮದಿನದ ಶುಭಾಶಯಗಳು

ಉಪಾಧ್ಯಕ್ಷಿಯಣಿಯವರು – ಶ್ರೀ ಬಸಂತ ರೆಡ್ಡಿ ಮೋತಕಪಲ್ಲಿಯವರೆ ಇಂದು ತಮ್ಮ 58 ನೇ ಜನ್ಮ ದಿನ. ಈ ಸಂದರ್ಭದಲ್ಲಿ ಸದನದ ಎಲ್ಲಾ ಸದಸ್ಯರ ಪರವಾಗಿ ಮತ್ತು ವೈಯುಕ್ತಿವಾಗಿ ತಮಗೆ ಶುಭ ಕೋರ್ತುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ತಾ : 11–3–92 ರ ಲಿಖಿತ ಮೂಲಕ ಉತ್ತರಿಸುವ 12ನೇ ಪಟ್ಟಿಯಲ್ಲಿರುವ 52 ಪ್ರಶ್ನೆಗಳ ಪೈಕಿ 1228, 1355, 1350, 234, 318, 320, 415, 416, 420, 5114, 5115, 616, 623, 583, ಪ್ರಶ್ನೆಗಳನ್ನು ಹೊರತುಪಡಿಸಿ 39 ಕ್ಕೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಾರ್ವಜನಿಕ ವ್ಯವಸ್ಥೆಯಲ್ಲಿರುವ ದರಗಳ ಬಗ್ಗೆ

1000. ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪಡಿತರ ಚೀಟಿದಾರರಿಗೆ ವಿತರಿಸಲಾಗುತ್ತಿರುವ ಸಾಧಾರಣ ಹತ್ಯುತ್ತಮ ಗುಣಮಟ್ಟದ ಅಕ್ಕಿಯ ಪ್ರಸ್ತುತ ಬೆಲೆ ಏನು?
2) ಮೊದಲಿದ್ದ ದರಗಳಾವುವು?
3) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ದಕ್ಷಿಣ ರಾಜ್ಯಗಳಲ್ಲಿ ಪೂರೈಸಲಾದ ಅಕ್ಕಿಯ ಈಗಿನ ಬೆಲೆಗಳಾವುವು?